<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C. 37/2021</u>

ದಿಃ 28.07.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ದೂರು ಕೊಟ್ಟ ನಂತರ ನನ್ನ ಮಗು ದಯಾನ್ ಖಾನ್ ನನ್ನು ಆರೋಪಿ ಮುಜಾಮಿಲ್ ಪಾಷ ಮೋಟಾರ್ ಸೈಕಲ್ ನಲ್ಲಿ ಕಿಡ್ನಾಪ್ ಮಾಡಿಕೊಂಡು ಹೋಗಿ, ಸಾಯಿಸಿ, ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ, ಬ್ರಿಡ್ಜ್ ನಿಂದ ಕೆಳಕ್ಕೆ ಎಸೆದು ಬಂಡೆ ಕಲ್ಲನ್ನು ಆತನ ಮೇಲೆ ಇರಿಸಲಾಗಿದೆ ಎಂದು ತಿಳಿಯಿತು. ನನ್ನ ಮಗನನ್ನು ರೇವಣ್ಣನ ತೋಟಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕೊಲೆ ಮಾಡಲಾಗಿದೆ. ಹಣಕ್ಕಾಗಿ ಈ ರೀತಿ ನನ್ನ ಮಗುವಿನ ಕೊಲೆ ಮಾಡಲಾಗಿದೆ. ನನ್ನ ಮಗುವನ್ನು ಕರೆದುಕೊಂಡುಹೋದಂತ ಮೋಟಾರ್ ಸೈಕಲ್ ನ ಸಂಖ್ಯೆ ನನಗೆ ಈಗ ನೆನಪಿಲ್ಲ. ನನ್ನ ಮಗುವನ್ನು ನೋಡಿದರೆ ಗುರುತಿಸಬಲ್ಲೆ. ಪೊಲೀಸರು ನನ್ನನ್ನು ನನ್ನ ಮಗನ ಕೊಲೆಗೆ ಸಂಬಂಧಿಸಿದಂತೆ ವಿಚಾರಣೆ ಮಾಡಿರುತ್ತಾರೆ. ನಾನು ಪೊಲೀಸರಿಗೆ ಎಲ್ಲಾ ವಿಚಾರವನ್ನು ತಿಳಿಸಿರುತ್ತೇನೆ. ಮುಜಾಮಿಲ್ ನನ್ನು ನೋಡಿದರೆ ಗುರುತಿಸಬಲ್ಲೆ, ಆತ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ. (ಸಾಕ್ಷಿ ಆರೋಪಿಯನ್ನು ಗುರುತಿಸಿ ಭಾವುಕರಾಗಿರುತ್ತಾರೆ)

<u>ಶ್ರೀ. ಎನ್ ಆರ್ ವಕೀಲರು ಆರೋಪಿ ಪರ ಪಾಟೀ ಸವಾಲಿಗೆ ಸಮಯವಾಕಾಶ ಕೇಳಿದ್ದು, ಕಾನೂನು ಸೇವಾ ಪ್ರಾಧೀಕಾರದಿಂದ ನೇಮಕಗೊಂಡಂತಹ ವಕೀಲರುಗಳ ಪರಿಶೀಲನಾ ಸಭೆ 5.00 ಗಂಟೆಗೆ ಇರುವುದರಿಂದ ತಾನು ಹಾಜರಾಗಬೇಕೆಂದು ಸಮಯ ಕೋರಿದ್ದು ಈಗ 4.40 ಗಂಟೆ ಸಮಯದಲ್ಲಿ ಪಾಟೀ ಸವಾಲಿಗೆ ಮುಂದೂಡಲಾಯಿತು.</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.